
**ATUL 8th B**
**(KJEMHS)**



**VIDWATH V 9th C**
**(KJEMHS)**




**ADITH N POOJARY**
**I PCMC (UJS)**

## ಮೌಲ್ಯಸುಧಾ ಉದ್ಘಾಟನೆ

### ಸಂಸ್ಕೃತಿ, ಸಂಸ್ಕಾರ, ಸದ್ವಿಚಾರದಡಿ ತಿಂಗಳ ಸರಣಿಯ ಕಾರ್ಯಕ್ರಮ ಮಾಲಿಕೆ




ಗಣಿತನಗರದ ಶ್ರೀ ಮಹಾಗಣಪತಿ ದೇವಸ್ಥಾನ ಹಾಗೂ ಅಜೆಕಾರ್ ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟ್ ನ ವತಿಯಿಂದ ಪ್ರಾರಂಭ ಗೊಂಡ ತಿಂಗಳ ಕಾರ್ಯಕ್ರಮ ಸರಣಿ ಮಾಲಿಕೆ ಮೌಲ್ಯಸುಧಾವನ್ನು ವಿದ್ವಾಂಸ ಶ್ರೀ ಮುನಿರಾಜ್ ರೆಂಜಾಳ ಉದ್ಘಾಟಿಸಿ, ಸ್ವಾಮಿ ವಿವೇಕಾನಂದರ ಜೀವನಾದರ್ಶಗಳು ಎಂಬ ವಿಷಯದ ಕುರಿತಂತೆ ಸರಣಿಯ ಮೊದಲ ಉಪನ್ಯಾಸ ನೀಡಿ ಮಾತನಾಡಿದರು.

**ಬದುಕು ಕಾವ್ಯ ವ್ಯತ್ಯಾಸವಿರದ ವ್ಯಕ್ತಿ ಸಾಹಿತ್ಯದ ಶಕ್ತಿ ಡಿವಿಜಿ – ಪ್ರಭಾಕರ್ ಕೊಂಡಳ್ಳಿ**




ಮೌಲ್ಯಸುಧಾ ಸರಣಿಯಲ್ಲಿ “ಕಗ್ಗದ ಬೆಳಕು” ವಿಷಯದಲ್ಲಿ 2ನೇ ಉಪನ್ಯಾಸವನ್ನು ಮುಂಡ್ಕೂರು ವಿದ್ಯಾವರ್ಧಕ ಪಿಯು ಕಾಲೇಜಿನ ಕನ್ನಡ ಅಧ್ಯಾಪಕ ಶ್ರೀ ಪ್ರಭಾಕರ ಕೊಂಡಳ್ಳಿ ನಡೆಸಿಕೊಟ್ಟರು.




ಮೌಲ್ಯಸುಧಾ ಸರಣಿಯಲ್ಲಿ “ವಿಜಯಶಾಲಿ ಭಾರತ” ಎಂಬ ವಿಷಯದಲ್ಲಿ 3ನೇ ಉಪನ್ಯಾಸವನ್ನು ಸಂವೇಧನಾ ಫೌಂಡೇಶನ್ ಸಂಸ್ಥಾಪಕ ಚಿಂತಕ ಶ್ರೀ ಪ್ರಕಾಶ್ ಮಲ್ಪೆ ನಡೆಸಿಕೊಟ್ಟರು.

**ಭಾರತ ಎಷ್ಟೇ ಜರ್ಜರಿತಗೊಂಡರೂ ತನ್ನ ಅಸ್ಮಿತೆಗಳನ್ನು ಕಳೆದುಕೊಂಡಿಲ್ಲ. ಎಷ್ಟೋ ನಾಗರಿಕತೆಗಳು ಅವಸಾನವಾದರೂ ಕೂಡಾ ಸಿಂಧೂ ನಾಗರಿಕತೆಯ ಈ ಹಿಂದೂ ಭೂಮಿ ತನ್ನ ಪರಂಪರೆಯನ್ನು ಹಾಗೇ ಉಳಿಸಿಕೊಂಡಿದೆ. ಅದನ್ನು ಬೆಳೆಸಿಕೊಂಡು ಹೋಗುವ ಜವಾಬ್ದಾರಿ ನಮ್ಮ ಮೇಲಿದೆ ಎಂದರು. – ಶ್ರೀ ಪ್ರಕಾಶ್ ಮಲ್ಪೆ**




ಮೌಲ್ಯಸುಧಾ ಸರಣಿಯ 4ನೇ ಮಾಲಿಕೆಯಲ್ಲಿ ವಿದ್ವಾನ್ ಶ್ರೀ ಯೋಗಿಶ್ ಕಿಣಿ ಮತ್ತು ತಂಡದಿಂದ 'ಭಕ್ತಿ ಭಾವ ಸಂಗಮ' ಗಾಯನ ಕಾರ್ಯಕ್ರಮವು ಜರುಗಿತು. ಭಕ್ತಿ ಗೀತೆ, ಭಾವಗೀತೆ, ದೇಶಭಕ್ತಿ ಗೀತೆಗಳ ಮೂಲಕ ಸಭಿಕರನ್ನು ಗಾಯನ ಲೋಕದಲ್ಲಿ ತೇಲಿಸಿದರು. ಈ ಸಂದರ್ಭ ಹಾರ್ಮೋನಿಯಂನಲ್ಲಿ ಶ್ರೀ ನಾಗರಾಜ್ ಶೆಣೈ, ತಬಲದಲ್ಲಿ ಶ್ರೀ ವಾಸುದೇವ ಕಿಣಿ ಮತ್ತು ಖಂಜಿರಾದಲ್ಲಿ ಶ್ರೀಮತಿ ಅರ್ಚನಾ ಯೋಗೀಶ್ ಕಿಣಿ ಸಾಥ್ ನೀಡಿದರು.

# ಕಾರ್ಕಳ ಜ್ಞಾನಸುಧಾ ಆಂಗ್ಲ ಮಾಧ್ಯಮ ಪ್ರೌಢ ಶಾಲೆ ಗಣಿತ ನಗರ

## ರಂಗದಲ್ಲಿ ಮಿಂಚಿದ ಜ್ಞಾನಸುಧಾ ಪ್ರೌಢಶಾಲೆಯ "ಸುಧಾ ರಂಗ" ನಾಟಕ ತಂಡ ವಿಜ್ಞಾನ ನಾಟಕ ಸ್ಪರ್ಧೆಯಲ್ಲಿ ಪ್ರಶಸ್ತಿ ಗಳಿಸಿದ ಹಿರಿಮೆ




ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್) ಉಡುಪಿಯ ಆಶ್ರಯದಲ್ಲಿ ವಿವಿಧ ಮಟ್ಟದಲ್ಲಿ ನಡೆದ 2022–23ನೇ ಸಾಲಿನ 23ನೇ ವಿಜ್ಞಾನ ನಾಟಕ ಸ್ಪರ್ಧೆಯಲ್ಲಿ ಕಾರ್ಕಳ ಜ್ಞಾನಸುಧಾ ಆಂಗ್ಲಮಾಧ್ಯಮ ಪ್ರೌಢಶಾಲೆಯ ಮಕ್ಕಳು ಪ್ರದರ್ಶಿಸಿದ 'ಇದು ಸತ್ಯ' ನಾಟಕವು ಕಾರ್ಕಳ ವಲಯ ಮಟ್ಟದಲ್ಲಿ ಪ್ರಥಮ ಸ್ಥಾನವನ್ನು, ಜಿಲ್ಲಾ ಮಟ್ಟದಲ್ಲಿ ತೃತೀಯ ಸ್ಥಾನವನ್ನು ಗಳಿಸಿದಲ್ಲದೆ 9ನೇ ತರಗತಿ ವಿದ್ಯಾರ್ಥಿನಿ ಸೃಷ್ಟಿ.ಆರ್.ಶೆಟ್ಟಿ ಅತ್ಯುತ್ತಮ ನಟಿ ಪ್ರಶಸ್ತಿಯನ್ನು ಹಾಗೂ ಶಾಲೆಯು ಉತ್ತಮ ನಿರ್ದೇಶನ ಪ್ರಶಸ್ತಿಯನ್ನು ಗಳಿಸಿರುತ್ತದೆ. ಹಾಗೂ ಕರ್ನಾಟಕ ನಾಟಕ ಅಕಾಡೆಮಿ ಬೆಂಗಳೂರು, ಉಡುಪಿಯ ಸುಮನಸಾ (ರಿ.), ಕೊಡವೂರು ಇವರ ಸಹಯೋಗದಲ್ಲಿ ನಡೆದ ಪ್ರೌಢಶಾಲೆಯ ವಿದ್ಯಾರ್ಥಿಗಳ ಜಿಲ್ಲಾಮಟ್ಟದ ನಾಟಕ ಸ್ಪರ್ಧೆಯಲ್ಲೂ ಸ್ಪರ್ಧಿಸಿ ದ್ವಿತೀಯ ಸ್ಥಾನವನ್ನು ಪಡೆದು ರಂಗಕರ್ಮಿಗಳ ಪ್ರಶಂಸೆಗೆ ಪಾತ್ರರಾಗಿದ್ದಾರೆ.

## ಆದರ್ಶ ಶಿಕ್ಷಕಿ ಪ್ರಶಸ್ತಿ ಗೌರವ



2022–23ನೇ ಸಾಲಿನ ಆದರ್ಶ ಆಸ್ಪತ್ರೆ ಉಡುಪಿ ಹಾಗೂ ಉಡುಪಿ ಜಿಲ್ಲಾ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಕೊಡ ಮಾಡುವ ಉಡುಪಿ ಜಿಲ್ಲಾ ಮಟ್ಟದ **ಆದರ್ಶ ಶಿಕ್ಷಕಿ ಪ್ರಶಸ್ತಿ**ಯು ಕಾರ್ಕಳ ಜ್ಞಾನಸುಧಾ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಉಷಾ ರಾವ್ ಯು ಅವರಿಗೆ ಲಭಿಸಿದೆ. ಇವರನ್ನು ಸಂಸ್ಥೆಯ ಅಧ್ಯಕ್ಷರು ಹಾಗೂ ಶಿಕ್ಷಕ ವೃಂದದವರು ಅಭಿನಂದಿಸಿದ್ದಾರೆ.

## ಯಕ್ಷಗಾನ ತರಬೇತಿಯ ತರಗತಿ ಉದ್ಘಾಟನೆ




ಯಕ್ಷಗಾನ ತರಬೇತಿಯ ತರಗತಿಯನ್ನು ಯಕ್ಷಗಾನ ಸಂಘಟಕರು, ಕಲಾವಿದರು ಹಾಗೂ ಯಕ್ಷಭಾರತಿ (ರಿ.) ಕನ್ಯಾಡಿ ಇವರು ನೀಡುವ ಯಕ್ಷಭಾರತಿ ಪ್ರಶಸ್ತಿ ಪುರಸ್ಕೃತರಾದ ಶ್ರೀ ಯಕ್ಷದೇಗುಲ ಕಾಂತಾವರದ ಪ್ರಧಾನ ಕಾರ್ಯದರ್ಶಿ ಶ್ರೀ ಮಹಾವೀರ ಪಾಂಡಿ ಕಾಂತಾವರ ಉದ್ಘಾಟಿಸಿದರು.

## ಚದುರಂಗ ಸ್ಪರ್ಧೆ –2022 : ಆಯೋಜನೆ



ಉಡುಪಿ ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಡುಪಿ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಕಾರ್ಕಳ ಹಾಗೂ ಕಾರ್ಕಳ ಜ್ಞಾನಸುಧಾ ಆಂಗ್ಲಮಾಧ್ಯಮ ಶಾಲೆ ಮತ್ತು ಪ್ರೌಢಶಾಲೆ ಇವರ ಸಂಯುಕ್ತ ಆಶ್ರಯದಲ್ಲಿ ಕಾರ್ಕಳ ತಾಲೂಕು ಮಟ್ಟದ ಪ್ರಾಥಮಿಕ ಮತ್ತು ಪ್ರೌಢ ಶಾಲಾ ವಿಭಾಗದ ಬಾಲಕ–ಬಾಲಕಿಯರ ಚದುರಂಗ ಸ್ಪರ್ಧೆ–2022ನ್ನು ಕುಕ್ಕುಂದೂರು ಗ್ರಾಮ ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ ಶಶಿಮಣಿ ಸಂಪತ್ ಸುವರ್ಣ ಹಾಗೂ ಶ್ರೀ ರವಿಚಂದ್ರ ಕಾರಂತ್ ಅವರು ಚದುರಂಗವನ್ನು ಆಡುವ ಮೂಲಕ ಸ್ಪರ್ಧೆಗೆ ಚಾಲನೆ ನೀಡಿದರು.

## ಎಸ್.ಎಸ್.ಎಲ್.ಸಿ ಸಾಧಕರಿಗೆ ಸನ್ಮಾನ



ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಯ ಮರು ಮೌಲ್ಯಮಾಪನದಲ್ಲಿ 624 ಅಂಕ ಗಳಿಸಿ, ರಾಜ್ಯ ಮಟ್ಟದಲ್ಲಿ ದ್ವಿತೀಯ ಸ್ಥಾನ ಪಡೆದ ವಿದ್ಯಾರ್ಥಿಗಳಾದ ಧನ್ಯಾ ನಾಯಕ್ ಮತ್ತು ಜೀವಿತ್ ಆರ್ ಚವ್ಹಾನ್ ಇವರನ್ನು ಸನ್ಮಾನಿಸಿ, 622 ಅಂಕ ಗಳಿಸಿದ ಜೀವನ್ ಆರ್ ಚವ್ಹಾನ್ ಹಾಗೂ ರಮಿತಾ ಆರ್ ಸೇರಿದಂತೆ, ವಿಷಯವಾರು ನೂರು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಗುರುತಿಸಿ ಗೌರವಿಸಿಲಾಯಿತು.

## ಆಟಿಡೊಂಜಿ ದಿನ



ಸ್ಕೌಟ್ಸ್ – ಗೈಡ್ಸ್ ವತಿಯಿಂದ ಆಟಿಡೊಂಜಿ ದಿನ ಹಿಂಗಾರ ಅರಳಿಸುವ ಮೂಲಕ ಕಾರ್ಯಕ್ರಮವನ್ನು ಉಧ್ಘಾಟಿಸಲಾಯಿತು. ಈ ಸಂದರ್ಭ ಮುಖ್ಯ ಅತಿಥಿಗಳಾಗಿ ಕಲ್ಲಮುಂಡ್ಕೂರು ಸರ್ವೋದಯ ಪ್ರೌಢ ಶಾಲೆಯ ಸಮಾಜ ವಿಜ್ಞಾನ ಶಿಕ್ಷಕರಾದ ಶ್ರೀಗುರು.ಎಂ.ಪಿ, ಶ್ರೀಮಧ್ ಭುವನೇಂದ್ರ ಪ್ರೌಢ ಶಾಲೆಯ ಕನ್ನಡ ಶಿಕ್ಷಕರಾದ ಶ್ರೀ ಗಣೇಶ್ ಜಾಲ್ಸೂರ್, ಸ್ಥಳೀಯ ಸಂಸ್ಥೆಗಳ ಸಹಾಯಕ ಜಿಲ್ಲಾ ಆಯುಕ್ತರಾದ ಶ್ರೀಮತಿ ಗೀತಾ ಸುಧೀರ್ ಕಾಮತ್ ಉಪಸ್ಥಿತರಿದ್ದರು. ಇದೇ ವೇಳೆ ತುಳುನಾಡಿನ ಅನೇಕ ಪರಿಕರಗಳ ಜೊತೆಗೆ ತುಳುನಾಡಿನ ವಿಶೇಷ ಖಾದ್ಯಗಳನ್ನು ಮಕ್ಕಳಿಗೆ ಪರಿಚಯಿಸಲಾಯಿತು.

## ವಿದ್ಯಾರ್ಥಿ ಸಂಸತ್ ಮತದಾನ ಪ್ರಕ್ರಿಯೆ



ಮಕ್ಕಳಲ್ಲಿ ನಾಯಕತ್ವದ ವರ್ಚಸ್ಸನ್ನು ಬೆಳೆಸುವ ಮತ್ತು ಮುಂದಾಳತ್ವವನ್ನು ಎಳೆವೆಯಲ್ಲಿಯೇ ರೂಪಿಸಲು ಕಾರ್ಕಳ ಜ್ಞಾನಸುಧಾ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯಲ್ಲಿ ಮತದಾನ ಪ್ರಕ್ರಿಯೆಯನ್ನು ಇ.ವಿ.ಎಂ ಮೂಲಕ ನಡೆಸಲಾಯಿತು. ವಿದ್ಯಾರ್ಥಿಗಳು ಸರತಿ ಸಾಲಿನಲ್ಲಿ ನಿಂತು ಮತದಾನ ಮಾಡಿದರು. 2022–23ರ ವಿದ್ಯಾರ್ಥಿ ನಾಯಕಿಯಾಗಿ ಹತ್ತನೇ ಬಿ ತರಗತಿಯ ಹರ್ಷಿಕಾ ಇವರು ಆಯ್ಕೆಯಾದರು. ಉಪನಾಯಕಿಯಾಗಿ ಹತ್ತನೇ ಬಿ ತರಗತಿಯ ಕುಪ್ರೇರಣಾ ಸುನಿಲ್ ಕುಮಾರ್ ಇವರು ಆಯ್ಕೆಯಾದರು.

## ಗುರುವಂದನಾ ಕಾರ್ಯಕ್ರಮ



ಡಾ। ಅಶೋಕ್‌ಕಾಮತ್ ಅವರಿಗೆ ಶಾಲಾ ವತಿಯಿಂದ ಗುರುವಂದನೆಯನ್ನು ಸಲ್ಲಿಸುವ ಮೂಲಕ ಗುರುಪೂರ್ಣಿಮೆಯನ್ನು ಆಚರಿಸಲಾಯಿತು.

## ಕಾರ್ಗಿಲ್ ವಿಜಯ ದಿವಸ ಕಾರ್ಗಿಲ್ ಯೋಧ ರಂಗಪ್ಪ ಆಲೂರರಿಗೆ ಸನ್ಮಾನ




**ಟ್ರೆಂಡ್‌ನ ಹಿಂದೆ ಹೋಗುವುದು ದೇಶ ಪ್ರೇಮವಲ್ಲ ಯಾವುದೋ ಹಾಡಿನ ಗುಂಗಿನಲ್ಲೆ ಮೈಮರೆತಿದ್ದೇವೆ. ನಾವು ಸೈನಿಕರಾಗದಿದ್ದರೂ ನಮ್ಮ ಕಾರ್ಯಕ್ಷೇತ್ರದಲ್ಲಿ ಸೈನಿಕರಂತಹ ಶಿಸ್ತನ್ನು, ಬದ್ಧತೆಯನ್ನು ವ್ಯಕ್ತಪಡಿಸುವಂತ ಮನೋಭಾವ ಹೊಂದಿದ್ದರೆ ಅದೇ ದೇಶಸೇವೆ**

**– ಚಿಂತಕ ಶ್ರೀಕಾಂತ್ ಶೆಟ್ಟಿ**

ಕಾರ್ಕಳ ಜ್ಞಾನಸುಧಾ ಶಿಕ್ಷಣ ಸಂಸ್ಥೆಗಳ ಆವರಣದಲ್ಲಿ ಜ್ಞಾನಸುಧಾ ಹಳೆ ವಿದ್ಯಾರ್ಥಿ ಸಂಘ, ಎನ್.ಸಿ.ಸಿ. ಹಾಗೂ ಎನ್.ಎಸ್ಎಸ್. ಸಹಯೋಗದೊಂದಿಗೆ ನಡೆದ 23ನೇ ಕಾರ್ಗಿಲ್ ವಿಜಯ ದಿವಸವನ್ನು ಅಜೆಕಾರ್ ಪದ್ಮಗೋಪಾಲ್ ಎಜುಕೇಶನ್ ಟ್ರಸ್ಟ್‌ನ ವತಿಯಿಂದ ವೀರಯೋಧ ರಂಗಪ್ಪ ಆಲೂರುರವರ ದೇಶಸೇವೆಯನ್ನು ಗುರುತಿಸಿ, ಸನ್ಮಾನಿಸಿ ರೂ.50ಸಾವಿರವನ್ನು ನೀಡಿ ಗೌರವಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆ ಮಾನ್ಯ ವಿಧಾನಪರಿಷತ್ ಮಾಜಿ ಸದಸ್ಯ ಕ್ಯಾ.ಗಣೇಶ್‌ಕಾರ್ಣಿಕ್ ವಹಿಸಿದ್ದರು.



## 76ರ ಸ್ವಾತಂತ್ರ್ಯ ಸಂಭ್ರಮ






ಸ್ವತಂತ್ರ ಭಾರತದ ಅಮೃತ ಮಹೋತ್ಸವದ ಸಂಭ್ರಮಾಚರಣೆಯಲ್ಲಿ ಭಾರತೀಯ ವಾಯುಸೇನೆಯ ಮಾಜಿ ಸೈನಿಕ ಸಾರ್ಜೆಂಟ್ ಶ್ರೀಕಾಂತ್ ಶೆಟ್ಟಿ ಬಿ ಇವರು ಧ್ವಜಾರೋಹಣ ಗೈದರು. ದೇಶಭಕ್ತಿ ಗೀತೆಯ ಝೇಂಕಾರಕ್ಕೆ ಭವ್ಯ ಭಾರತದ ತ್ರಿವರ್ಣ ಧ್ವಜ ವಿದ್ಯಾರ್ಥಿಗಳ ಕೈಯಲ್ಲಿ ರಾರಾಜಿಸುವ ಸಂಭ್ರಮದ ಕ್ಷಣಕ್ಕೆ ಜ್ಞಾನಸುಧಾ ಸಾಕ್ಷಿಯಾಯಿತು.

## ಶಿಕ್ಷಕರ ದಿನಾಚರಣೆ

### ಕಾರ್ಕಳ ಜ್ಞಾನಸುಧಾ




ಶಿಕ್ಷಕರ ದಿನಾಚರಣೆಯ ಪ್ರಯುಕ್ತ ಅಜೆಕಾರ್ ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟ್‌ನ ವತಿಯಿಂದ ಕಾರ್ಕಳ ತಾಲೂಕಿನ ಪ್ರಾಥಮಿಕ ಶಾಲೆಗಳ 6 ನಿವೃತ್ತ ಶಿಕ್ಷಕರಾದ ಕಾಂತಾವರದ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಯ ಶ್ರೀ ಧರ್ಮರಾಜ್ ಕಂಬಳಿ, ಶ್ರೀ ದುರ್ಗಾ ಅನುದಾನಿತ ಪ್ರಾಥಮಿಕ ಶಾಲೆ ಜೋಡು ರಸ್ತೆಯ ಶ್ರೀ ಕೆ. ಸಿ. ಲೂಕಸ್, ಅನುದಾನಿತ ಹಿರಿಯ ಪ್ರಾಥಮಿಕ ಶಾಲೆ ವಂಜಾರಕಟ್ಟೆಯ ಶ್ರೀಮತಿ ಶಾರದಾ ಬಿ., ಸರಕಾರಿ ಪ್ರಾಥಮಿಕ ಶಾಲೆ ಕಲ್ಲುಗುಪ್ಪೆಯ ಮುಖ್ಯ ಶಿಕ್ಷಕಿ ಶ್ರೀಮತಿ ಸುಮಿತ್ರಾ ಜೈನ್, ಸರಕಾರಿ ಪ್ರಾಥಮಿಕ ಶಾಲೆ ಹೊಸ್ಮಾರಿನ ಶ್ರೀಮತಿ ರೇವತಿ ಎನ್. ರಾಜ್ ಹಾಗೂ ಸರಕಾರಿ ಪ್ರಾಥಮಿಕ ಶಾಲೆ ನಂದಳಿಕೆಯ ಬೆನಿಟಾ ಫ್ಲಾವಿಯಾ ಪಿಂಟೋ ಇವರನ್ನು ಸನ್ಮಾನಿಸಲಾಯಿತು.

### ಉಡುಪಿ ಜ್ಞಾನಸುಧಾ



ಶಿಕ್ಷಕರ ದಿನಾಚರಣೆಯ ಪ್ರಯುಕ್ತ ಅಜೆಕಾರ್ ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟ್‌ನ ವತಿಯಿಂದ ಉಡುಪಿ ತಾಲೂಕಿನ ಪ್ರಾಥಮಿಕ ಶಾಲೆಗಳ 3 ನಿವೃತ್ತ ಶಿಕ್ಷಕರಾದ ಕಡಿಯಾಳಿ ಹಿರಿಯ ಪ್ರಾಥಮಿಕ ಶಾಲೆಯ ನಿವೃತ್ತ ಮುಖ್ಯೋಪಾಧ್ಯಾಯರಾದ ಶ್ರೀ ಪಿ.ಕೆ.ಸದಾನಂದ ಶರ್ಮ, ಕಡಿಯಾಳಿ ಹಿರಿಯ ಪ್ರಾಥಮಿಕ ಶಾಲೆಯ ನಿವೃತ್ತ ಶಿಕ್ಷಕಿಯರಾದ ಶ್ರೀಮತಿ ಮಹಾಲಕ್ಷ್ಮೀ ಮತ್ತು ಶ್ರೀಮತಿ ಕಮಲಾಕ್ಷಿ ಎನ್ ಉಪಧ್ಯಾಯ ಇವರನ್ನು ಉಡುಪಿ ನಗರಸಭೆಯ ಪೌರಾಯುಕ್ತರಾದ ಡಾ. ಉದಯ್ ಕುಮಾರ್ ಶೆಟ್ಟಿ ಇವರ ಉಪಸ್ಥಿತಿಯಲ್ಲಿ ಗೌರವಿಸಲಾಯಿತು.

## ಸೇವಾ ಕಾರ್ಯ ಪ್ರವೃತ್ತಿಯೊಂದಿಗೆ ಗಾಂಧಿ ಮತ್ತು ಶಾಸ್ತ್ರೀ ಜಯಂತಿ ಆಚರಣೆ




ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರ 153ನೇ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಅವರ 118ನೇ ಜನ್ಮ ಜಯಂತಿಯನ್ನು ಪುಷ್ಪ ನಮನದೊಂದಿಗೆ ಆಚರಿಸಲಾಯಿತು. ಪ್ರತಿ ವರ್ಷದಂತೆ ಸಾಮಾಜಿಕ ಕಾರ್ಯವಾಗಿ ಈ ವರ್ಷ ಸಾಲ್ಮರದ ಸುರಕ್ಷಾ ಸೇವಾಶ್ರಮ ಹಾಗೂ ಕುಕ್ಕುಂದೂರಿರ ವಿಜೇತಾ ವಿಶೇಷ ಮಕ್ಕಳ ಶಾಲೆಗೆ ಅಜೆಕಾರು ಪದ್ಮಗೋಪಾಲ್ ಎಜುಕೇಶನ್ ಟ್ರಸ್ಟ್ ವತಿಯಿಂದ ಹಣ್ಣು ಹಂಪಲು ವಿತರಿಸಲಾಯಿತು. ಸ್ವಚ್ಛ ಭಾರತ ಕಲ್ಪನೆಯೊಂದಿಗೆ ಸಂಸ್ಥೆಯ ಸುತ್ತ–ಮುತ್ತ ಸ್ವಚ್ಛತಾ ಕಾರ್ಯವನ್ನು ಕೈಗೊಳ್ಳಲಾಯಿತು.

ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರ 153ನೇ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಅವರ 118ನೇ ಜಯಂತಿಯನ್ನು ಉಡುಪಿ ಜ್ಞಾನಸುಧಾ ಪದವಿ ಪೂರ್ವ ಕಾಲೇಜಿನ ನಾಗಬನ ಕ್ಯಾಂಪಸ್‌ನಲ್ಲಿ ಸರಳವಾಗಿ ಆಚರಿಸಲಾಯಿತು.



## ರಾಷ್ಟ್ರೀಯ ಸೇವಾ ಯೋಜನೆ

ವಿದ್ಯಾರ್ಥಿಗಳ ವ್ಯಕ್ತಿತ್ವ ರೂಪುಗೊಳ್ಳಲು, ಸೇವಾಮನೋಭಾವದ 'ನನಗಲ್ಲ ನಿನಗೆ' ಎಂಬ ಚಿಂತನೆಯೊಂದಿಗೆ ಸ್ಥಾಪಿತಗೊಂಡಂತಹ ರಾಷ್ಟ್ರೀಯ ಸೇವಾ ಯೋಜನೆ ನಮ್ಮ ಕಾಲೇಜಿನಲ್ಲೂ ಕಳೆದ 10 ವರ್ಷಗಳಿಂದ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದೆ. 2022–2023ನೇ ಸಾಲಿನ ಕಾರ್ಯಚಟುವಟಿಕೆಗಳನ್ನು ಸರಕಾರಿ ಪ್ರಥಮದರ್ಜೆ ಕಾಲೇಜು ಹೆಬ್ರಿಯ ಪ್ರಾಂಶುಪಾಲರಾದ ಡಾ. ಪ್ರಸಾದ್ ರಾವ್ ಅವರು ದೀಪ ಪ್ರಜ್ವಲಿಸಿ ಉದ್ಘಾಟಿಸಿ. "ಶೈಕ್ಷಣಿಕ ಜೀವನದಲ್ಲಿ ಎನ್ನೆಸ್ಸೆಸ್ ಸಹಬಾಳ್ವೆಯ ಜೀವನದೊಂದಿಗೆ ಶ್ರಮದ ಮಹತ್ವ ತಿಳಿಸಿಕೊಡುತ್ತದೆ. ಸೇವಾ ಮನೋಭಾವನೆಯಿರುವವರಿಗೆ ಬೆಲೆಯೂ, ಬಲವೂ ಬರುತ್ತದೆ" ಎಂದು ವಿದ್ಯಾರ್ಥಿಗಳಿಗೆ ಉತ್ತೇಜಿಸಿದರು.



**ಎನ್.ಎಸ್.ಎಸ್. ಕಾರ್ಯ ಚಟುವಟಿಕೆಗಳ ಉದ್ಘಾಟನೆ**

ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ಆಶ್ರಯದಲ್ಲಿ 'ರಾಷ್ಟ್ರೀಯ ಸೇವಾ ಯೋಜನಾ ದಿನ'ವನ್ನು ಆಚರಿಸಲಾಯಿತು. ಕಾರ್ಕಳ ತಾಲೂಕು ಪಂಚಾಯತ್ ಮಾಜಿ ಸದಸ್ಯ ಶ್ರೀ ಅಶೋಕ್ ಶೆಟ್ಟಿ, ಕಾರ್ಕಳ ತಾಲೂಕು ಛಾಯಾಚಿತ್ರ ಗ್ರಾಹಕರ ಸಂಘದ ಮಾಜಿ ಅಧ್ಯಕ್ಷ ಶ್ರೀ ಪ್ರಸಾದ್ ಐಸಿರ, ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.



**ರಾಷ್ಟ್ರೀಯ ಸೇವಾ ಯೋಜನಾ ದಿನಾಚರಣೆ**

## ಮಣ್ಣು ಉಳಿಸಿ (Save Soil) ಅಭಿಯಾನ

ಭೂಮಿಯು ಸುಂದರವಾದ ವಧುವಿನಂತೆ, ಅವಳ ಸೌಂದರ್ಯವನ್ನು ಹೆಚ್ಚಿಸಲು ಯಾವುದೇ ಮಾನವ ನಿರ್ಮಿತ ಆಭರಣಗಳ ಅಗತ್ಯವಿಲ್ಲ. ಪ್ರಕೃತಿ ಮಾತೆಯ ಸಂರಕ್ಷಣೆಯ ಆಶಯದೊಂದಿಗೆ ನಮ್ಮ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನಾ ಘಟಕ ಮತ್ತು ಈಶ ಫೌಂಡೇಶನ್‌ಗಳ ಸಂಯುಕ್ತ ಆಶ್ರಯದಲ್ಲಿ ಮಣ್ಣು ಉಳಿಸಿ ಅಭಿಯಾನ ನಡೆಯಿತು.




## ವಿಶ್ವ ಹೃದಯ ದಿನ



ವಿಶ್ವ ಹೃದಯ ದಿನದ ಪ್ರಯುಕ್ತ ರೋಟರಿ ಕ್ಲಬ್ ಕಾರ್ಕಳ ರಾಕ್ ಸಿಟಿ ಆಯೋಜಿಸಿದ "ಆರೋಗ್ಯಕ್ಕಾಗಿ ನಡಿಗೆ" ಅಭಿಯಾನದಲ್ಲಿ ನಮ್ಮ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ತಂಡ ಭಾಗವಹಿಸಿ ಪ್ರಶಂಸೆಗೆ ಪಾತ್ರರಾದ ಸಂಭ್ರಮದ ಕ್ಷಣ.

## ಸ್ವಚ್ಛ ಭಾರತ್ ಅಭಿಯಾನ

ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರ ಜನ್ಮ ದಿನದ ಪ್ರಯುಕ್ತ ಸಂಸ್ಥೆಯ ಸುತ್ತ–ಮುತ್ತ ಸ್ವಚ್ಛತಾ ಅಭಿಯಾನವನ್ನು ಕೈಗೊಳ್ಳಲಾಯಿತು.




## ಯೋಗ ಪ್ರಾತ್ಯಕ್ಷಿಕೆ

ವಿಶ್ವ ಯೋಗ ದಿನಾಚರಣೆಯ ಪ್ರಯುಕ್ತ ಕಾಲೇಜಿನ ಸಿಬ್ಬಂದಿ, ಯೋಗ ಸಾಧಕಿ ಕುಮಾರಿ ಅರ್ಚನಾ ಇವರು ಕಾರ್ಕಳ ಜ್ಞಾನಸುಧಾ ಪಿಯು ವಿದ್ಯಾರ್ಥಿಗಳಿಗೆ ಯೋಗಾಸನಗಳನ್ನು ಪ್ರಾತ್ಯಕ್ಷಿಕೆ ನೀಡಿದರು.



## ವಿಶ್ವ ಯೋಗ ದಿನಾಚರಣೆ




ಕಾರ್ಕಳ ಜ್ಞಾನಸುಧಾ ಆಂಗ್ಲಮಾಧ್ಯಮ ಶಾಲೆಯಲ್ಲಿ ಅಂತರಾಷ್ಟ್ರೀಯ ಯೋಗ ದಿನಾಚರಣೆಯನ್ನು ಕರ್ನಾಟಕ ರಾಜ್ಯ ನಿರಂತರ ಯೋಗಾಸನ ಕ್ರೀಡಾ ಸಂಸ್ಥೆಯ ಜಿಲ್ಲಾಧ್ಯಕ್ಷರಾದ ಶ್ರೀ ನಿತ್ಯಾನಂದ ಪೈಯವರು ಉದ್ಘಾಟಿಸಿದರು.

## ಯೋಗ ಸಾಧಕಿಗೆ ಸನ್ಮಾನ

ಕಾರ್ಕಳ ಜ್ಞಾನಸುಧಾ ಆಂಗ್ಲಮಾದ್ಯಮ ಶಾಲೆಯಲ್ಲಿ ವಿಶ್ವಯೋಗ ದಿನಂದಂದು ಯೋಗ ಸಾಧಕಿ ಕು.ಅರ್ಚನಾ ನಾಯ್ಕ್ (ಅಂತರಾಷ್ಟ್ರೀಯ ಮಟ್ಟದಲ್ಲಿ ಭಾರತವನ್ನು ಪ್ರತಿನಿಧಿಸಲಿರುವ ಕಾರ್ಕಳ ಜ್ಞಾನಸುಧಾ ಸಂಸ್ಥೆಯ ಉದ್ಯೋಗಿ) ಇವರನ್ನು ಸನ್ಮಾನಿಸಲಾಯಿತು.



## ನನ್ನ ಬಾಳ ಬೆಳಕು

ನಗುಮೊಗದಿ ಬಂದ ಈ ನನ್ನ ಜೀವನದ ಸರದಾರ
ನನ್ನ ಪುಟ್ಟ ಮನಸ್ಸಿನ ಮನೆಯ ವಾರಸುದಾರ
ಪ್ರೀತಿ ಮಮತೆಯ ತುಂಬಿ ನನ್ನನ್ನು ಬೆಳೆಸಿದ ಸುಕುಮಾರ
ಜೀವನದಲ್ಲಿ ಮುನ್ನಡೆಯಲು ಕಲಿಸಿಕೊಟ್ಟ ಸುಧೀರ
ನನ್ನ ಮನಸ್ಸನ್ನು ಮಗುವಂತೆ ಅರಿತ ಮಗಧೀರ
ಏನೇ ಕೇಳಿದರೂ ಇಲ್ಲ ಎನ್ನದಿರುವ ಮಹಾವೀರ
ಎಷ್ಟೇ ಕಷ್ಟ ಬಂದರೂ ಮುನ್ನಡೆಸುವ ಮಹಾಶೂರ
ಎಷ್ಟೇ ದುಃಖದಲ್ಲಿದ್ದರೂ ತಾಯಿಯ ಪ್ರೀತಿಯ ನೀಡುವ ಮಮತಾಕಾರ
ಅವರೇ ನನ್ನ ತೀರ್ಥರೂಪರಾಗಿರುವ ಚಂದ್ರಶೇಖರ ।

– **ಮೋನಿಶಾ ಚಂದ್ರಶೇಖರ್,** 21 ಪಿ.ಸಿ.ಎಂ.ಬಿ

## ಯೋಗ ಪ್ರದರ್ಶನ

ಗಿನ್ನೆಸ್ ದಾಖಲೆ ಖ್ಯಾತಿಯ ಯೋಗಪಟು ಕು.ತನುಶ್ರೀ ಪಿತ್ರೋಡಿಯವರು ಕಾರ್ಕಳ ಜ್ಞಾನಸುಧಾ ಆಂಗ್ಲಮಾಧ್ಯಮ ಪ್ರೌಢಶಾಲೆ ಮತ್ತು ಆಂಗ್ಲಮಾದ್ಯಮ ಪ್ರಾಥಮಿಕ ಶಾಲೆಯಲ್ಲಿ ಯೋಗ ಪ್ರಾತ್ಯಕ್ಷಿಕೆಯೊಂದಿಗೆ ಯೋಗ ನೃತ್ಯವನ್ನು ಪ್ರದರ್ಶಿಸಿದರು. ಈ ಸಂದರ್ಭ ಯೋಗಸಾಧಕಿಯನ್ನು ಸಂಸ್ಥೆಯ ವತಿಯಿಂದ ಸನ್ಮಾನಿಸಲಾಯಿತು.



# 2022–23ನೇ ಸಾಲಿನ ಪದವಿ ಪೂರ್ವ ಶಿಕ್ಷಣ ಇಲಾಖೆಯ ಆಶ್ರಯದಲ್ಲಿ ನಡೆದ ವಿವಿಧ ಕ್ರೀಡೆಗಳ ಸಾಧಕರು

## ತ್ರೋಬಾಲ್ : ಸ್ವಾತಿ ಶೆಟ್ಟಿ ರಾಷ್ಟ್ರ ಮಟ್ಟಕ್ಕೆ ಆಯ್ಕೆ



ದೊಡ್ಡಬಳ್ಳಾಪುರದಲ್ಲಿ ನಡೆದ ರಾಜ್ಯಮಟ್ಟದ ತ್ರೋಬಾಲ್ ಪಂದ್ಯಾಟದಲ್ಲಿ ಉಡುಪಿ ಜಿಲ್ಲೆಯ ಬಾಲಕಿಯರ ತಂಡವು ಪ್ರಥಮ ಸ್ಥಾನಗಳಿಸಿದ್ದು ಕಾಲೇಜಿನ ದ್ವಿತೀಯ ವಾಣಿಜ್ಯ ವಿಭಾಗದ ವಿದ್ಯಾರ್ಥಿನಿ ಕು.ಸ್ವಾತಿ ಶೆಟ್ಟಿ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಲಿದ್ದಾರೆ. ಇವರು ಅರವಿಂದ ಶೆಟ್ಟಿ ಮತ್ತು ವೇದಾವತಿ ಶೆಟ್ಟಿ ದಂಪತಿಗಳ ಪುತ್ರಿಯಾಗಿದ್ದಾರೆ.

## ಕರಾಟೆ : ರಾಜ್ಯಮಟ್ಟದಲ್ಲಿ ಬೆಳ್ಳಿ ಪದಕ





ಜಿಲ್ಲಾ ಮಟ್ಟದ ಕರಾಟೆ ಸ್ಪರ್ಧೆಯಲ್ಲಿ ಕಾಲೇಜಿನ ಪ್ರಥಮ ವಿಜ್ಞಾನ ವಿಭಾಗದ ಚಂದನಾ ಗಂಗಾಧರ್ ನಾಯಕ್ ದ್ವಿತೀಯ ಸ್ಥಾನ ಗಳಿಸಿದ್ದು, ದ್ವಿತೀಯ ವಿಜ್ಞಾನ ವಿಭಾಗದ ಸುಹಾಸ್ ಜೋಳದ್ ಹಾಗೂ ಪ್ರಥಮ ವಿಜ್ಞಾನ ವಿಭಾಗದ ಸ್ತುತಿ ಜೈನ್ ಎಚ್.ಪಿ. ಪ್ರಥಮ ಸ್ಥಾನ ಗಳಿಸಿ ಶಿವಮೊಗ್ಗದಲ್ಲಿ ನಡೆದ ರಾಜ್ಯಮಟ್ಟದ ಕರಾಟೆ ಸ್ಪರ್ಧೆಯಲ್ಲಿ ಭಾಗವಹಿ ಬೆಳ್ಳಿಪದಕವನ್ನು ಪಡೆದು ಸಂಸ್ಥೆಯ ಹಿರಿಮೆಗೆ ಪಾತ್ರರಾಗಿದ್ದಾರೆ.

## ಹ್ಯಾಂಡ್ ಬಾಲ್ : ಪ್ರಜ್ವಲ್ ರೆಡ್ಡಿ ರಾಜ್ಯಮಟ್ಟಕ್ಕೆ ಆಯ್ಕೆ



ಜಿಲ್ಲಾ ಮಟ್ಟದ ಹ್ಯಾಂಡ್ ಬಾಲ್ ಪಂದ್ಯಾಟದಲ್ಲಿ ಕಾಲೇಜಿನ ವಿಜ್ಞಾನ ವಿಭಾಗದ ವಿದ್ಯಾರ್ಥಿ ಪ್ರಜ್ವಲ್ ರೆಡ್ಡಿ ತುಮಕೂರಿನಲ್ಲಿ  ನಡೆಯುವ ರಾಜ್ಯಮಟ್ಟದ ಹ್ಯಾಂಡ್ ಬಾಲ್ ಪಂದ್ಯಾಟಕ್ಕೆ ಆಯ್ಕೆಯಾಗಿರುತ್ತಾರೆ. ಇವರು ಶ್ರೀನಿವಾಸ್ ಎಸ್.ಬಿ. ಮತ್ತು ಎ.ಎಲ್.ಸತೀದೇವಿ ದಂಪತಿಯ ಪುತ್ರರಾಗಿದ್ದಾರೆ.

## ಚದುರಂಗದಲ್ಲಿ ಅರುಂದತಿ ಜಿ.ವಿ ರಾಜ್ಯಮಟ್ಟಕ್ಕೆ



ಜಿಲ್ಲಾ ಮಟ್ಟದ ಚದುರಂಗ ಪಂದ್ಯಾಟದಲ್ಲಿ ಕು.ಅರುಂದತಿ ಜಿ.ವಿ. 5ನೇ ಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದರು. ಮುಂದೆ ರಾಮನಗರದ ಬಿಡದಿಯಲ್ಲಿ ನಡೆದ ರಾಜ್ಯಮಟ್ಟದ ಚದುರಂಗ ಸ್ಪರ್ಧೆಯಲ್ಲಿ ತಮ್ಮ ಉತ್ತಮ ಪ್ರದರ್ಶನದಿಂದ ಪರೀಕ್ಷಕರ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಇವರು ಶ್ರೀ  ಗಣೇಶ್ ವಿ.ಜಿ. ಮತ್ತು ಶ್ರೀಮತಿ ವೀಣಾ ದಂಪತಿಗಳ ಪುತ್ರಿ,

## ಬಾಸ್ಕೆಟ್ ಬಾಲ್ : 6 ವಿದ್ಯಾರ್ಥಿಗಳು ರಾಜ್ಯಮಟ್ಟಕ್ಕೆ ಆಯ್ಕೆ







ಜಿಲ್ಲಾ ಮಟ್ಟದ ಬಾಸ್ಕೆಟ್ ಬಾಲ್ ಪಂದ್ಯಾಟದಲ್ಲಿ ದ್ವಿತೀಯ ಸ್ಥಾನ ಗಳಿಸಿದ ಕಾಲೇಜಿನ ಬಾಲಕರ ಹಾಗೂ ಬಾಲಕಿಯರ ತಂಡ.

## ಫುಟ್ಬಾಲ್ ತಂಡದಿಂದ ರಾಜ್ಯಮಟ್ಟಕ್ಕೆ ಆಯ್ಕೆ




ತಾಲೂಕು ಮಟ್ಟದ ಫುಟ್ಬಾಲ್ ಪಂದ್ಯಾಟದಲ್ಲಿ ಪ್ರಥಮ ಸ್ಥಾನ ಗಳಿಸಿದ ಕಾಲೇಜಿನ ಬಾಲಕಿಯರ ತಂಡ

## ತ್ರೋಬಾಲ್ ತಂಡದಿಂದ ಅತ್ಯುತ್ತಮ ಪ್ರದರ್ಶನ




ತಾಲೂಕು ಮಟ್ಟದ ತ್ರೋಬಾಲ್ ಪಂದ್ಯಾಟದಲ್ಲಿ ಪ್ರಥಮ ಸ್ಥಾನ ಪಡೆದ ಬಾಲಕಿಯರ ತಂಡ



ತಾಲೂಕು ಮಟ್ಟದ ತ್ರೋಬಾಲ್ ಪಂದ್ಯಾಟದಲ್ಲಿ ದ್ವಿತೀಯ ಸ್ಥಾನ ಪಡೆದ ಬಾಲಕರ ತಂಡ

## ಬ್ಯಾಡ್ಮಿಂಟನ್ : ಜಿಲ್ಲಾ ಮಟ್ಟದಲ್ಲಿ  ದ್ವಿತೀಯ ಸ್ಥಾನ



ಜಿಲ್ಲಾ ಮಟ್ಟದ ಬ್ಯಾಡ್ಮಿಂಟನ್ ಪಂದ್ಯಾಟದಲ್ಲಿ ದ್ವಿತೀಯ ಸ್ಥಾನ ಗಳಿಸಿದ ಕಾಲೇಜಿನ ಬಾಲಕರ ತಂಡ

## ವಾಲಿಬಾಲ್ ತಾಲೂಕು ಮಟ್ಟದಲ್ಲಿ ದ್ವಿತೀಯ ಸ್ಥಾನ




ತಾಲೂಕು ಮಟ್ಟದ ವಾಲಿಬಾಲ್ ಪಂದ್ಯಾಟದಲ್ಲಿ ರನ್ನರ್ ಅಪ್ ಪ್ರಶಸ್ತಿ ಪಡೆದುಕೊಂಡ ಕಾಲೇಜಿನ ಬಾಲಕಿಯರ ತಂಡ

## ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ ತೃತೀಯ ಸ್ಥಾನ



ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಪ್ರಯುಕ್ತ  ದಿಶಾ ಭಾರತ ಆಯೋಜಿಸಿದ ರಾಜ್ಯಮಟ್ಟದ  ಪ್ರಬಂಧ ಸ್ಪರ್ಧೆಯಲ್ಲಿ ಪ್ರೌಢ ಶಾಲಾ ಮತ್ತು ಪಿ.ಯು.ಸಿ ವಿದ್ಯಾರ್ಥಿಗಳ ವಿಭಾಗದಲ್ಲಿ ಕಾರ್ಕಳ ಜ್ಞಾನಸುಧಾ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯ  9ನೇ  ತರಗತಿ ವಿದ್ಯಾರ್ಥಿನಿ ಕುಮಾರಿ ಸಹನಾ.ಎನ್ ತೃತೀಯ ಬಹುಮಾನವನ್ನು ಪಡೆದು ಶಾಲೆಯ ಕೀರ್ತಿಗೆ ಪಾತ್ರರಾಗಿದ್ದಾರೆ. ಇವರು ಶಂಕರ್ ನಾಯ್ಕ್ ಮತ್ತು ಪ್ರಭಾ ಕುಮಾರಿ ದಂಪತಿಯ ಪುತ್ರಿಯಾಗಿದ್ದಾರೆ.

## ರಾಜ್ಯಮಟ್ಟದ ರಸಪ್ರಶ್ನೆ ಸ್ಪರ್ಧೆಯಲ್ಲಿ ಬಹುಮಾನ



ಸ್ವಾತಂತ್ರ್ಯ ಅಮೃತಮಹೋತ್ಸವ ಪ್ರಯುಕ್ತ ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ ನಡೆಸಿದ ರಸಪ್ರಶ್ನೆ ಸ್ಪರ್ಧೆಯಲ್ಲಿ ಪ್ರೌಢಶಾಲೆಯ 10ನೇ ತರಗತಿ ವಿದ್ಯಾಥಿ ಕೆ.ಮನೋಜ್ ಕಾಮತ್ ಸಮಾಧಾನಕರ ಬಹುಮಾನ ಪಡೆದು ಪ್ರಶಂಸೆಗೆ ಪಾತ್ರರಾಗಿದ್ದಾರೆ.

## ಪ್ರತಿಭಾ ಕಾರಂಜಿ : ತಾಲೂಕು ಮಟ್ಟಕ್ಕೆ ಆಯ್ಕೆ

ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಸ್ಪರ್ಧೆಯಲ್ಲಿ ಕಾರ್ಕಳ ಜ್ಞಾನಸುಧಾ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿಗಳಾದ ಸಂಸ್ಕೃತಿ  4ನೇತರಗತಿ ಛದ್ಮವೇಷದಲ್ಲಿ ಪ್ರಥಮ ಬಹುಮಾನ, ತ್ರಿಶಾ 4ನೇತರಗತಿ ಚಿತ್ರಕಲೆಯಲ್ಲಿ ಪ್ರಥಮ ಬಹುಮಾನ, ಜೇಡನ್ ಅರ್ವಿನ್ 4ನೇತರಗತಿ ಇಂಗ್ಲಿಷ್ ಕಂಠ ಪಾಠದಲ್ಲಿ ಪ್ರಥಮ ಬಹುಮಾನ, ಭೂಮಿಕ 4ನೇ ತರಗತಿ ಭಕ್ತಿ ಗೀತೆಯಲ್ಲಿ ಪ್ರಥಮ ಬಹುಮಾನ ಗಳಿಸಿರುತ್ತಾರೆ.  ಅವನೀಶ್ ಎಸ್ 5ನೇತರಗತಿ ಛದ್ಮವೇಷದಲ್ಲಿ ಪ್ರಥಮ ಬಹುಮಾನ, ಮನ್ವಿತ್ 6ನೇ ತರಗತಿ ಲಘುಸಂಗೀತ ಮತ್ತು ಭಕ್ತಿಗೀತೆಯಲ್ಲಿ ಪ್ರಥಮ ಬಹುಮಾನ, ಪ್ರಕೃತಿ ನಾಯ್ಕ 7ನೇ ತರಗತಿ ಕಥೆ ಹೇಳುವುದರಲ್ಲಿ ಪ್ರಥಮ ಬಹುಮಾನ, ವರ್ಷಾ ಆರ್ ಎಸ್ 7ನೇ ತರಗತಿ ಅಭಿನಯ ಗೀತೆ ಮತ್ತು ಅಶು ಭಾಷಣದಲ್ಲಿ ಪ್ರಥಮ ಬಹುಮಾನ ಗಳಿಸಿರುತ್ತಾರೆ. ಅನನ್ಯ ಪ್ರಭು 8ನೇ ತರಗತಿ ಭರತನಾಟ್ಯದಲ್ಲಿ ಪ್ರಥಮ ಬಹುಮಾನ, ಮಿಶಲ್ ಅಸದಿ8ನೇ ತರಗತಿ ಚಿತ್ರಕಲೆಯಲ್ಲಿ ಪ್ರಥಮ ಬಹುಮಾನ, ಕೀರ್ತನಾ 9ನೇ ತರಗತಿ ಕನ್ನಡ ಭಾಷಣದಲ್ಲಿ ಪ್ರಥಮ ಬಹುಮಾನ, ಸಾನ್ವಿ ರೈ 10ನೇ ತರಗತಿ ಇಂಗ್ಲಿಷ್ ಭಾಷಣದಲ್ಲಿ ಪ್ರಥಮ ಬಹುಮಾನ, ಕೆ ಮನೋಜ್ ಕಾಮತ್ 10ನೇ ತರಗತಿ ಸಂಸ್ಕೃತ ಭಾಷಣದಲ್ಲಿ ಪ್ರಥಮ ಬಹುಮಾನ ಗಳಿಸಿ ತಾಲೂಕು ಮಟ್ಟದ ಪ್ರತಿಭಾ  ಕಾರಂಜಿಗೆ ಆಯ್ಕೆಯಾಗಿರುತ್ತಾರೆ.

## ವಿಜ್ಞಾನ ವಿಚಾರ ಗೋಷ್ಠಿ : ಮೈಥಿಲಿ ಪ್ರಭುಗೆ ಜಿಲ್ಲಾ ಮಟ್ಟದಲ್ಲಿ ದ್ವಿತೀಯ ಸ್ಥಾನ

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್) ಉಡುಪಿಯ ಆಶ್ರಯದಲ್ಲಿ ನಡೆಯುವ 2022–23ನೇ ಸಾಲಿನ ವಿಜ್ಞಾನ ವಿಚಾರ ಗೋಷ್ಠಿಯ ಸ್ಪರ್ಧೆಯಲ್ಲಿ ಕಾರ್ಕಳ ಜ್ಞಾನಸುಧಾ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯ 9ನೇ ತರಗತಿ ವಿದ್ಯಾರ್ಥಿನಿ ಮೈಥಿಲಿ ಪ್ರಭುಗೆ ಜಿಲ್ಲಾ ಮಟ್ಟದಲ್ಲಿ ದ್ವಿತೀಯ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿ ಉಡುಪಿ ಜಿಲ್ಲಾ ಮಟ್ಟದಲ್ಲೂ ಸ್ಪರ್ಧಿಸಿ ದ್ವಿತೀಯ ಸ್ಥಾನ ಗಳಿಸಿ ತನ್ನ ವಿಚಾರ ಮಂಡನೆಯ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಇವರು ಕಾರ್ಕಳ ನಿತ್ಯಾನಂದ ಪ್ರಭು  ಮತ್ತು ಜ್ಯೋತಿ ಪ್ರಭು ದಂಪತಿಯ ಸುಪುತ್ರಿಯಾಗಿದ್ದಾರೆ.



# 2022–23ನೇ ಸಾಲಿನಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ನಡೆಸಿದ ವಿವಿಧ ಕ್ರೀಡೆಗಳ ಸಾಧಕರು

## ರಾಜ್ಯ ಮಟ್ಟಕ್ಕೆ

**ಚದುರಂಗ ಸ್ಪರ್ಧೆ :** ಪ್ರೌಢ ಶಾಲೆಯ 17 ವರ್ಷ ವಯೋಮಿತಿಯ ಬಾಲಕಿಯರ ವಿಭಾಗದಲ್ಲಿ 9ನೇ ತರಗತಿಯ ದಿಶಾ.ಯು.ಎ. ಹಾಗೂ 14 ವರ್ಷ ವಯೋಮಿತಿಯ ಪ್ರಾಥಮಿಕ ಶಾಲಾ ಬಾಲಕರ ವಿಭಾಗದಲ್ಲಿ 7ನೇ ತರಗತಿಯ ಎಸ್.ಆರ್.ಸುಮುಖ್ ಇವರು ಪ್ರಶಸ್ತಿ ಪಡೆದು ರಾಜ್ಯ ಮಟ್ಟದ ಚದುರಂಗ ಸ್ಪರ್ಧೆಗೆ ಆಯ್ಕೆ ಆಗಿರುತ್ತಾರೆ.


**ದಿಶಾ.ಯು.ಎ.**


**ಎಸ್.ಆರ್.ಸುಮುಖ್**

**ಈಜು ಸ್ಪರ್ಧೆ :** ಜಿಲ್ಲಾ ಮಟ್ಟದ ಈಜು ಸ್ಪರ್ಧೆಯಲ್ಲಿ ಭೂಮಿ 7ನೇ ತರಗತಿ ಇವರು 14 ವರ್ಷ ವಯೋಮಿತಿಯ ಬಾಲಕಿಯರ 50ಮೀ ಫ್ರೀ ಸ್ಟೈಲ್ ಈಜು ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ, 50ಮೀ ಬ್ಯಾಕ್ ಸ್ಟ್ರೋಕ್ ಈಜು ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಹಾಗೂ 100ಮೀ ಫ್ರೀ ಸ್ಟೈಲ್ ಈಜು ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದು ವೈಯುಕ್ತಿಕ ಚಾಂಪಿಯನ್‌ಶಿಪ್‌ನೊಂದಿಗೆ ರಾಜ್ಯ ಮಟ್ಟದ ಈಜು ಸ್ಪರ್ಧೆಗೆ ಆಯ್ಕೆ ಆಗಿರುತ್ತಾರೆ.



**ಯೋಗಾಸನ ಸ್ಪರ್ಧೆ :** ಯೋಗಾಸನ ಸ್ಪರ್ಧೆ : 14 ವರ್ಷ ವಯೋಮಿತಿಯ ಬಾಲಕಿಯರ ವಿಭಾಗದ ರಿದಮಿಕ್ ಯೋಗಾಸನ ಸ್ಪರ್ಧೆಯಲ್ಲಿ 8ನೇ ತರಗತಿಯ ವಿದ್ಯಾರ್ಥಿನಿ ಕುಮಾರಿ ಅಶ್ನಿ ಕೋಟ್ಯಾನ್ ಜಿಲ್ಲಾ ಮಟ್ಟದ ಯೋಗಾಸನ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದು ಮೈಸೂರು ವಿಭಾಗೀಯ ಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.



## ಚಿತ್ರಕಲಾ ಸ್ಪರ್ಧೆ : ಜಿಲ್ಲಾ ಮಟ್ಟಕ್ಕೆ ಆಯ್ಕೆ

ಪರಿಸರ ಜಾಗೃತಿ ಅಭಿಯಾನ ಕುರಿತು ವಿಜಯ ಕರ್ನಾಟಕ ದಿನಪತ್ರಿಕೆ ಆಯೋಜಿಸಿದ್ದ ಚಿತ್ರಕಲಾ ಸ್ಪರ್ಧೆಯ ಅಂತಿಮ ಸುತ್ತಿನಲ್ಲಿ ಕಾರ್ಕಳ ಜ್ಞಾನಸುಧಾ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯ ವಿದ್ಯಾರ್ಥಿಗಳಾದ 8ನೇ ತರಗತಿಯ ಮಿಶಲ್ ಅಸದಿ, 9ನೇ ತರಗತಿಯ ಜೈ ಕಿಶನ್ ಹಾಗೂ 10ನೇ ತರಗತಿಯ ಸ್ತುತಿ ನಾಯಕ್ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.


**ಮಿಶಲ್ ಅಸದಿ**


**ಜೈ ಕಿಶನ್**


**ಸ್ತುತಿ ನಾಯಕ್**

**ಸಂಸ್ಥೆಯ ಎಲ್ಲಾ ಕ್ರೀಡಾ ಮತ್ತು ಸಾಂಸ್ಕೃತಿಕ ಸಾಧಕ ವಿದ್ಯಾರ್ಥಿಗಳನ್ನು**
**ಅಜೆಕಾರ್ ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟ್‌ನ**
**ಅಧ್ಯಕ್ಷ ಡಾ.ಸುಧಾಕರ್ ಶೆಟ್ಟಿಯವರು ಅಭಿನಂದಿಸಿದ್ದು, ಆಡಳಿತ ಮಂಡಳಿ ಹಾಗೂ**
**ಬೋಧಕ – ಬೋಧಕೇತರ ಸಿಬ್ಬಂದಿ ವರ್ಗ ಹರ್ಷವ್ಯಕ್ತಪಡಿಸಿ ಶುಭಹಾರೈಸಿದೆ.**

## ಜಿಲ್ಲಾ ಮಟ್ಟಕ್ಕೆ

**ಕರಾಟೆ ಸ್ಪರ್ಧೆ :** ತಾಲೂಕು ಮಟ್ಟದ ಕರಾಟೆ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಈ ಸ್ಪರ್ಧೆಯಲ್ಲಿ 17 ವರ್ಷ ವಯೋಮಿತಿಯ ಬಾಲಕಿಯರ 54 ಕೆಜಿ ವಿಭಾಗದಲ್ಲಿ ಸೃಷ್ಟಿ ಆರ್ ಶೆಟ್ಟಿ 9ನೇ ತರಗತಿ ಪ್ರಥಮ ಸ್ಥಾನ, 38 ಕೆಜಿ ವಿಭಾಗದಲ್ಲಿ ತ್ರಿಷಾ ಶೆಟ್ಟಿ 9ನೇ ತರಗತಿ ಪ್ರಥಮ ಸ್ಥಾನ, 17 ವರ್ಷ ವಯೋಮಿತಿಯ ಬಾಲಕರ 72 ಕೆಜಿ ವಿಭಾಗದಲ್ಲಿ ಪ್ರಣವ್ ಪಿ ಶೆಟ್ಟಿ 9ನೇ ತರಗತಿ ಪ್ರಥಮ ಸ್ಥಾನ ಪಡೆದು ಜಿಲ್ಲಾ ಮಟ್ಟದ ಕರಾಟೆ ಸ್ಪರ್ಧೆಗೆ ಆಯ್ಕೆ ಆಗಿರುತ್ತಾರೆ.


**ಸೃಷ್ಟಿ ಆರ್ ಶೆಟ್ಟಿ**


**ತ್ರಿಷಾ ಶೆಟ್ಟಿ**


**ಪ್ರಣವ್ ಪಿ ಶೆಟ್ಟಿ**

**ಕುಸ್ತಿ ಸ್ಪರ್ಧೆ:** ಕುಸ್ತಿ ಸ್ಪರ್ಧೆ: ತಾಲೂಕು ಮಟ್ಟದ ಪ್ರೌಢ ಶಾಲಾ ವಿಭಾಗದ ಬಾಲಕ ಬಾಲಕಿಯರ ಕುಸ್ತಿ ಸ್ಪರ್ಧೆಯ ಆಯ್ಕೆ ಪ್ರಕ್ರಿಯೆಯನ್ನು ನಡೆಸಲಾಗಿತ್ತು. ಈ ಸ್ಪರ್ಧೆಯಲ್ಲಿ ನಿಶಾಂತ್ ಸಿ ಹೆಗ್ಡೆ 9ನೇ ತರಗತಿ ಇವರು ಬಾಲಕರ ವಿಭಾಗದಿಂದ ಜಿಲ್ಲಾಮಟ್ಟದ ಕುಸ್ತಿ ಸ್ಪರ್ಧೆಗೆ ಆಯ್ಕೆ ಆಗಿರುತ್ತಾರೆ.



**ತ್ರೋಬಾಲ್ :** ತಾಲೂಕು ಮಟ್ಟದ 14ರ ವಯೋಮಿತಿಯ ತ್ರೋಬಾಲ್ ಪಂದ್ಯಾಟದಲ್ಲಿ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಿದ ಜ್ಞಾನಸುಧಾ ಆಂಗ್ಲಮಾಧ್ಯಮ ಪ್ರೌಢಶಾಲೆಯ 8ನೇ ತರಗತಿಯ ವಿದ್ಯಾರ್ಥಿಗಳಾದ ಕು.ಪ್ರಾಂಜಲಿ ಹಾಗೂ ಧನ್ಯಶ್ರೀ ಜಿಲ್ಲಾಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.


**ಧನ್ಯಶ್ರೀ**


**ಕು.ಪ್ರಾಂಜಲಿ**

**ಕ್ರಿಕೆಟ್ :** ತಾಲೂಕು ಮಟ್ಟದ ಪ್ರಾಥಮಿಕ ಮತ್ತು ಪ್ರೌಢ ಶಾಲಾ ವಿಭಾಗದ ಬಾಲಕರ ಕ್ರಿಕೆಟ್ ಆಯ್ಕೆ ಪ್ರಕ್ರಿಯೆಯನ್ನು ಆಯೋಜಿಸಲಾಗಿತ್ತು. ಈ ಆಯ್ಕೆ ಪ್ರಕ್ರಿಯೆಯಲ್ಲಿ 17 ವರ್ಷ ವಯೋಮಿತಿಯ ವಿಭಾಗದಲ್ಲಿ ಕಾರ್ಕಳ ಜ್ಞಾನಸುಧಾ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯ ಸುಮುಖ್ ರಾಜ್ 9ನೇ ತರಗತಿ, ಚಿನ್ಮಯ್ ಯು ಕಾಮತ್ 9ನೇ ತರಗತಿ, ಹಾಗೂ ಪ್ರಾಥಮಿಕ ಶಾಲಾ ವಿಭಾಗದಲ್ಲಿ ಶೋಧನ್ ವರ್ಮ 8ನೇತರಗತಿ, ಚಿರಾಗ್ ತೆಂಡುಲ್ಕರ್ 8ನೇ ತರಗತಿ ಇವರು ಜಿಲ್ಲಾ ಮಟ್ಟದ ಕ್ರಿಕೆಟ್ ತಂಡಕ್ಕೆ ಆಯ್ಕೆ ಆಗಿರುತ್ತಾರೆ.


**ಸುಮುಖ್ ರಾಜ್**


**ಚಿನ್ಮಯ್ ಯು ಕಾಮತ್**


**ಶೋಧನ್ ವರ್ಮ**


**ಚಿರಾಗ್ ತೆಂಡುಲ್ಕರ್**

## ಓ ಬಾಲ್ಯವೇ

ಆ ಪುಟ್ಟ ಕೈ ಕಾಲುಗಳು
ಬಣ್ಣದ ಲೋಕ ಕಾಣುವ ಪಿಳಿಪಿಳಿ ಕಣ್ಣುಗಳು
ನೆಲದಿಂದ ಏಳದಿದ್ದರೂ ಹಿರಿಯರ ಹಾಗಿನ ವರ್ತನೆಗಳು
ಸಿಕ್ಕಲ್ಲಿ ಸಾವಿರ ಪ್ರಶ್ನೆಗಳು
ಅಲ್ಲಲ್ಲಿ ಒಂದಿಷ್ಟು ತುಂಟಾಟಗಳು
ಅದರಿಂದ ತಿಂದ ಲೆಕ್ಕವಿಲ್ಲದಷ್ಟು ಪೆಟ್ಟುಗಳು
ಆಹಾ . . . .! ಎಂಥ ಚಂದವೋ ಆ ಬಾಲ್ಯದ ದಿನಗಳು ।

ಕಲಿಸಿತು ಪ್ರೀತಿಸಲು ಜೀವವಿಲ್ಲದ ಗೊಂಬೆಗೆ ನೀಡಿದ ಪ್ರೀತಿ
ಮರೆಸಿತು ಹಸಿವನು ಅಂಗಳದಲಿ ಕೂತು ಮಾಡಿದ ಮಣ್ಣಿನ ಕಾಫಿ
ಶಾಲೆಗೆ ರಜೆ ಹಾಕಲು ನೀಡಿದ ಆ ಕುಂಟುನೆಪಗಳು
ಗೆಳೆಯರೊಂದಿಗಿನ ಸಣ್ಣಪುಟ್ಟ ಜಗಳಗಳು
ಭೇದ ಭಾವವಿಲ್ಲದ ಮುಗ್ದ ಭಾವನೆಗಳು
ಚಿಂತೆಯಿಲ್ಲದ ಆ ದಿನಗಳು
ಇನ್ನು ಕೇವಲ ಹಗಲುಗನಸುಗಳು
ಆಹಾ . . . .! ಎಂಥ ಚಂದವೋ ಆ ಬಾಲ್ಯದ ದಿನಗಳು ।

– **ಐಸಿರಿ.ಎಂ.ಶೆಟ್ಟಿ,** ದ್ವಿತೀಯ ವಿಜ್ಞಾನ ವಿಭಾಗ

## ಬಾಳ ಪಯಣ

ಬದುಕೊಂದು ಯಾನ
ಬಲು ಸುಂದರ ಪಯಣ
ಅಳುತ್ತಾ ಬಂದೆವು
ಅಳಿಸುತ್ತಾ ತೆರಳುವೆವು
ಪೆಟ್ಟು ತಿಂದು ಕಲಿಸಿದ ಪಾಠ
ಜುಟ್ಟು ಹಿಡಿದು ಆಡಿದ ಜಗಳ
ಅಂದು ಏನು ಮಾಡಿದರೂ ಚಂದ
ಅದ ನೆನದಾಗ ಬದುಕಿಗೊಂದು ಅಂದ
ಓಡುತ್ತಾ ಬರುವೆವು ಯೌವ್ವನದ ಹಾದಿಗೆ
ಮುನಿಸು ಸಹಜ ಹೆತ್ತವರೊಂದಿಗೆ
ಹಗಲಿರುಳು ಶ್ರಮಿಸುತ್ತಾ
ಗುರಿಗಾಗಿ ಓಡುತ್ತಾ
ಬೇಕು ಬೇಡಗಳ ಅರಿವು
ನಮ್ಮಲ್ಲಿ ಬೆಳೆದ ನಮ್ಮ ತನವು
ಬಯಸದೆ ಬರುವ ಮುಪ್ಪು
ಅರಿವಾಗುವ ಅದೆಷ್ಟೋ ತಪ್ಪು
ಅರೆನಿದ್ರೆ ತುಂಬಿದ ಕಣ್ಣಿನಲ್ಲಿ
ಇಡುತ್ತೇವೆ ಕೊನೆಯ ಆಸೆ ದೇವರಲ್ಲಿ
ತುಂಬಿದ ಅನುಭವಗಳ ಕಿಸೆಯಲ್ಲಿ
ಮೆಲ್ಲನೆ ಜಾರು ನೆನಪಿನ ದೋಣಿಯಲ್ಲಿ

– **ದೀಕ್ಷಿತಾ. ಸಿ. ಓ.** ದ್ವಿತೀಯ ವಿಜ್ಞಾನ ವಿಭಾಗ

## EXPERIENCES

Sometimes, I think for long,
After hearing the grievances of the young.
It's not the matter of age,
Or the years you spend on earth.

'Experiences' teach us lessons,
Lessons that we all learn from,
The effects of it are ever-lasting.
But, there's something else,
More exciting;

Recalling those events,
Recalling those lessons.
The eagerness to share those
With the young perhaps.
The feel of enthusiasm,
It's yet,
Another experience…….!

**- Sanjana Sanjay Patgar,** 22 PCMB

## ಅಮೃತಮಹೋತ್ಸವ

ಇಂದು ಸ್ವಾತಂತ್ರ್ಯದಮೃತ ಮಹೋತ್ಸವ ಭಾರತದ ಗಲ್ಲಿಗಲ್ಲಿಗಳಲ್ಲಿ
ಸಂಭ್ರಮದೋತ್ಸವ
ಭಾರತಾಂಭೆಯ ಪೂಜೆಯಲ್ಲಿ ತೊಡಗಿಹರು ಜನಸಾಮಾನ್ಯರು
ಭಾರತದೆಡೆಗೆ ಕೀಳರಿಮೆ ತೋರಿದರೆ ಕುದಿಯುದೆಲ್ಲರ ನೆತ್ತರು ।

ಅಂದು ವಿಶ್ವವೆಂಬ ಕೊಚ್ಚೆಯಲ್ಲಿ ಅರಳಿತು ಭಾರತವೆಂಬ ಕಮಲ
ಎಲ್ಲ ಕಷ್ಟ ಕಡಿವಾಣಗಳ ಮೀರಿ ಬೀರಿತು ಗಟ್ಟಿತನದ ಹೊನಲ
ಇದಕ್ಕೆಲ್ಲ ಕಾರಣ ನಮ್ಮ ಹೋರಾಟಗಾರರ ಛಲ ।

ಅಂದು ಎಪ್ಪತ್ತೈದು ವರ್ಷದ ಹಿಂದೆ ನಮ್ಮನ್ನು ದೋಚಿದರು ಬ್ರಿಟೀಷರು
ಇಂದು, ನಮ್ಮ ನಾಯಕರೆಂದು ನಮ್ಮ ಶೋಷಿಸುತ್ತಿಹರು ಖದೀಮರು
ಇದು ನಮ್ಮ ಸ್ವಾತಂತ್ರ್ಯ
ಹೆಣ್ಣೊಬ್ಬಳು ಒಬ್ಬಂಟಿಯಾಗಿ ಹೋಗುವಾಗಿಲ್ಲ ಅತ್ಯಾಚಾರದ ಪ್ರಕರಣ
ಯಾವತ್ತೂ ಶುದ್ಧವಾಗುವುದು ಜನಸಾಮಾನ್ಯರ ಅಂತಃಕರಣ
ಇದು ನಮ್ಮ ಸ್ವಾತಂತ್ರ್ಯ ।

ನೆರೆಹೊರೆಯ ರಾಷ್ಟ್ರದೊಂದಿಗೆ ಬೇಕೆ ಹೊಡೆದಾಟ ?
ಭೂಭಾಗದ ಸ್ವತ್ತು ಪಡೆಯಲು ಸುಖಸುಮ್ಮನೆ ಕಿತ್ತಾಟ !
ಇದೆಲ್ಲವ ಮೀರಿ ಕೊನೆಗೊಂದು ಮಾತು
ಅಸೂಯೆಯ ಮರೆತು ನಿರ್ಮಿಸೋಣ ಸ್ನೇಹದ ಸೇತು ।

ಎಷ್ಟೇ ಆದರೂ ಇಂದು ಸ್ವಾತಂತ್ರ್ಯದ ಅಮೃತ ಮಹೋತ್ಸವ
ಭಾರತದ ಗಲ್ಲಿಗಲ್ಲಿಗಳಲ್ಲಿ ಸಂಭ್ರಮೋತ್ಸವ
ಎತ್ತಿ ಹಿಡಿಯೋಣ ಭರತದ ಸಂಸ್ಕೃತಿ
ದೇಶ ರಕ್ಷಣೆಯೆಡೆಗೆ ತಿರುಗಿಸು ನಿನ್ನಯ ಸ್ಮೃತಿ
ಉಳಿಸು ಭರತದ ಆಸ್ತಿ ॥

**– ಪ್ರಿಯದರ್ಶನ, ಪ್ರಥಮ ವಿಜ್ಞಾನ ವಿಭಾಗ**

## ಸೊಬಗಿನ ಸುಧಾ

ನೋಡಿ ಈ ಕಾಲೇಜಿನ ಅಂದ, ಪಾಠ ಕಲಿಸೋ ಶಿಕ್ಷಕರ ಅನುಬಂಧ
ಇದನ್ನೆಲ್ಲ ನೋಡಿ ವಿದ್ಯಾರ್ಥಿಗಳು ಪಡುತ್ತಾರೆ ಆನಂದ
ಇದೇ ಒಂದು ಶಾಲೆಗಿರೋ ಬೇಕಾದ ಅಂದಚಂದ ।

ಕರ್ನಾಟಕದಲೊಂದು ಚಿಕ್ಕ ಊರು ಕಾರ್ಕಳ
ಒಂದು ಸಾರಿ ಬಂದು ನೋಡು ಈ ಅಂಗಳ
ತಲೆಯೆತ್ತಿ ನಿಂತಿದೆ ಶಾಲೆಯ ಕಟ್ಟಡ
ಕಣ್ಮನ ಸೆಳೆಯುವ ಹಸಿರು ಹಸಿರಿನ ಪರಿಸರ ।

ಇಲ್ಲಿ ನೋಡ ಬಹುದು ಗೊಮ್ಮಟನ ಎತ್ತರದ ಮೂರ್ತಿ
ಜನರ ಮನಮನಗಳಲ್ಲೂ ಪ್ರೀತಿಯೊಲುಮೆಯ ಶೃತಿ
ಹಸಿರು ಪರಿಸರದ ನಡುವೆ ಇರುವುದು ಜ್ಞಾನಸುಧಾ
ನೋಡುಗರ ಕಣ್ಣು ಸೆಳೆಯುವುದು ನೈವೇದ್ಯ ಸುಧಾ ।

ಕಲ್ಲಾಗಿ ಬಂದ ವಿದ್ಯಾರ್ಥಿಗಳನ್ನು ಕೆತ್ತಿ ಮಾಡುವರು
ಸುಂದರವಾದ ಜ್ಞಾನದ ಮೂರ್ತಿ
ಶಿಕ್ಷಕರ ಮನಮನಗಳಲ್ಲಿ ಉಕ್ಕಿ ಹರಿಯುವ ಆ ಪ್ರೀತಿ
ಇದೇ ಒಂದು ಶಾಲೆಗಿರ ಬೇಕಾದ ಕೀರ್ತಿ ।

– **ಕಾವೇರಿ ಬಾಳೇಶ ಮುಗಳಿ,** ದ್ವಿತೀಯ ವಿಜ್ಞಾನ ವಿಭಾಗ

## ಕರುಣೆಯ ಕಡಲು ತಾಯಿಯ ಒಡಲು

ನಿನ್ನೀ ಸಹನೆಗೆ ಸಾಟಿಯಿಲ್ಲ ನಿನ್ನೀ ಕರುಣೆಗೆ ಪೈಪೋಟಿಯಿಲ್ಲ
ನಿನ್ನ ತಾಯ್ತನದ ಕರ್ತವ್ಯಕೆ ಬೆಲೆ ಕಟ್ಟಲು ಸಾದ್ಯವೇ ಇಲ್ಲ
ನೀ ಸರಿ ಎಂದದ್ದು ಸರಿ ಎಂದು, ನೀ ತಪ್ಪೆಂದದ್ದು ತಪ್ಪೆಂದು
ನಂಬಿರುವೆ ನಾನು ಅದಕೆ ಅರ್ಹಳು ನೀನೆಂದು ।
ಎಲ್ಲರ ಸಿಟ್ಟಿಗೆ ಬಲಿಯಾದವಳು ನೀನು
ಎಲ್ಲರನ್ನು ಶಾಂತಗೊಳಿಸಬಲ್ಲವಳು ನೀನು
ಎಲ್ಲರನ್ನು ಸಂಭಾಳಿಸುವ ಸಾಮರ್ಥ್ಯ ಉಳ್ಳವಳು ನೀನು
ನಿನ್ನಂತೆ ತಾಳ್ಮೆಯುಳ್ಳವಳು ಯಾರು ?
ನಿನ್ನಿಂದ ಹುಟ್ಟಿದ ಈ ಜೀವ ಮಿಡಿಯುವುದು ನಿನಗಾಗಿ
ನಿನ್ನನ್ನು ತಾಯಿಯಾಗಿ ಪಡೆದ ನಾನೇ ಭಾಗ್ಯವಂತಳು ।

**– ಅಕ್ಷರಿ.ಎ.ಆರ್., ಪ್ರಥಮ ವಿಜ್ಞಾನ ವಿಭಾಗ**

## CAGED FOR FREEDOM

Light started its journey,
Far away from their hometown
Choosing between contentment and pleasure
And to make their parents proud.

From the top hills to the coastal belts
Came varieties of birds
With their tender wings and dreams
To learn how to fly.

Flying high is not that easy
But it's neither too hard
What it requires is just some hope and efforts
To reach the clear blue sky.

They used to be isolated
Guarded by the fright of fall
Here comes the time to gather their wings
To face the greatest fear of life once and for all.

Now the birds are on the tree
Not knowing what's coming next
Mixed feelings, mixed emotions,
Totally confused!

The ripen fruits hanging down the tree
Choice can be bitter or boon
The bower filled with rotten fruits
Which scares the bird under every moon

The birds start to flap their wings
Because they have to predate to live
Learning from the mistakes and
Teaching others to live!

It's a war for not more than two years
Everyone's waiting behind
There is no way to turn back and flee
Because it's the time to decide.

The birds are given a task to fly
Guided by the pleasant souls
What's remaining is to spread their wings
And fly until they reach their goals.

There comes a day when blossoms shower
And all the birds start flying high
The feeling of bliss and cheerful vibes
To return to native with great joy.

It's not just about flying high
It's about the knowledge and values we get
The goal reached against every odd
Along with the research of life.

The tree is rich with pleasant souls
Guiding the birds for once more
Its root fixed tightly to the ground
Neither rain nor storm can roar.

The two years have passed by,
But the tree is still and strong
Providing shelter to many new birds
And teaching them how to fly along!

**- Vaishnavi Shetty , 22 PCMB.**

## TRUE TRUST

When everyone seems to
leave you,
When remainings are just a few ;
Stuck in a situation,
Escaping out of reach.
You get frustrated….!

When anguishing is your destination,
When sufferings can't be broken
free,
All that's left for you is true trust-
That remainings are only in hearts of
not many…!

**-Sanjana Sanjay Patgar,**
22 PCMB

## GOLDEN TIME

60 seconds of 1 minute
Tell never let down smile
on your face.
24 hours make a day
Time for study & sleep & play.

Seven days make a week
Which plays hide & seek.
365 days make a year
Which increases my age.

Ten years make a decade
Which makes life a charade.
100 years make a century
Which is a beautiful life of treasury.

**- TRISHA SHETTY, 9TH B.**

## IN THE NIGHT SKY

Look, the moon started its shift,
To my bedroom window, I drift,
Gazing the glimpse of
incomparable light,
Wow, what a beautiful sight!
Stars as if diamonds flung up,
Is an affiliation for my mood backup,
It beams a smile, erasing my doom
With its bewildering beauty
of angelic gloom!
In the dusk, when the world sleeps,
I avail of the blowing breeze,
At last, how can the
dark-bright twilight,
Make me sleep at the
magnificent night!
**- Maithili Prabhu, 9th B.**

## NATURE

One fine morning, I went to park;
To take a walk.
The chant of birds,
And the flow of water in ponds;
Was like a pleasant song,
To stop my morning yawn.
The wind breezed gently with
perfume of flowers
I followed the smell;
And found a hill
Which was filled with divine flower
And beautiful butterflies of
different colours
I didn't know how the time passed
By watching the nature,
that enriches our future.
"Nature" is the gift of God
So let us join our hands,
To save our land
And be the part of solution,
But not of pollution
Therefore, I have a dream
and it's green.

**-Ananya M Bhat, 8TH A.**

## वरिष्ट नागरिकों का सम्मान

हमारे बुजुर्ग हमारी नींव है। जिनके बिना हमारा समाज का कोई वजूद नहीं। वो तो ऐसे वृक्ष की छाया है, जिनके नीचे बैटकर हम अपनी तमाम व्यथाएँ और कष्ट भूल जाते है। जो संतान अपनी जड़ों से जुड़ी रहेगी वह सुखी रहेगी। समाज और राष्ट में बुजुर्गों का मान सम्मान रखना है। बुढ़पे में उन्हें बच्चों की तरह देखबाल करना चाहिए। जब व्यक्ति इस सफर पर पहुँचता है तो मान सम्मन का हक भी रखता है । बड़े दुःख के साथ यह बात स्वीकार करनी पड़ती है कि आज हमारे बुजुर्ग उस सम्मान को पाने को तरस रहे है, जिसके वे हकदार है।

खुशि एस, शेट्टि, 22 पि,सि.एम.एस.

## ಪುಷ್ಪ ನಮನ



ಅಕ್ಟೋಬರ್ 8ರಂದು ದಿ. ಓಣಿಮಜಲು ಜಗನ್ನಾಥ ಶೆಟ್ಟಿಯವರನ್ನು ಪುಷ್ಪ ನಮನದ ಮೂಲಕ ಸಂಸ್ಮರಿಸಲಾಯಿತು.

## ಚೌತಿ ಸಂಭ್ರಮ

ಜ್ಞಾನಸುಧಾ ಶಿಕ್ಷಣ ಸಂಸ್ಥೆಗಳ ಆವರಣದಲ್ಲಿರುವ ಶ್ರೀ ಮಹಾಗಣಪತಿ ದೇವಸ್ಥಾನದಲ್ಲಿ ಚೌತಿ ಹಬ್ಬದ ಪ್ರಯುಕ್ತ ವಿಶೇಷ ಗಣಹೋಮ, ಮಹಾಪೂಜೆ, ರಂಗಪೂಜೆ, ಭಜನಾ ಕಾರ್ಯಕ್ರಮ, ಪಟ್ಟಾಭಿರಾಮ್ ಸುಳ್ಯ ಇವರಿಂದ ಹಾಸ್ಯ ಕಾರ್ಯಕ್ರಮ ನಡೆಯಿತು. ವಿದ್ಯಾರ್ಥಿಗಳಿಗೆ ಭಕ್ತಿಗೀತೆ ಸ್ಪರ್ಧೆ, ಗಣೇಶನ ಚಿತ್ರಕಲೆ ಮತ್ತು ಹಗ್ಗ ಜಗ್ಗಾಟ, ಮಡಿಕೆ ಒಡೆಯುವ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು.

## FIRE & SAFETY AWARENESS



'Awareness is the first step in healing'. With this intention,a Fire safety and ealth safety awareness programme was organised by the Neuro hospital in our college auditorium. A two hour demo was conducted by the Fire safety officer Mr.Sathya Raj to create awareness to all the attendees and explained the different types of fire extinguishers and their usage.

The students were involved in the demo process and learnt to deal with the prevention of accidental generation of fire in the different situations. First aid and other information in regard to heath were given in the programme.

## ಆರೋಗ್ಯದರಿವು

ಡೆಂಗ್ಯೂ ಮತ್ತು ಮಲೇರಿಯಾ ವಿರೋಧಿ ಮಾಸಾಚರಣೆಯ ಪ್ರಯುಕ್ತ ಕುಕ್ಕುಂದೂರು ಪ್ರಾಥಮಿಕ ಆರೋಗ್ಯ ಪ್ರಭಾರ ಜಿಲ್ಲಾ ಆರೋಗ್ಯ ರಕ್ಷಣಾಧಿಕಾರಿಯಾದ ಶ್ರೀ ಶಶಿಧರ್.ಎಚ್. ಡೆಂಗ್ಯೂ ಮತ್ತು ಮಲೇರಿಯಾ ಹರಡುವ ಸೊಳ್ಳೆಗಳ ಬಗ್ಗೆ, ರೋಗ ಲಕ್ಷಣಗಳು ಮತ್ತು ಔಷಧೋಪಚಾರದ ಕುರಿತು ಹಾಗೂ ಪ್ಲಾಸ್ಟಿಕ್ ಬಳಕೆಯ ಕುರಿತಂತೆ ಎಚ್ಚರಿಕೆ ವಹಿಸುವಂತೆ ಮಾಹಿತಿ ನೀಡಿದರು. ಇದೇ ಸಂದರ್ಭ ಕುಕ್ಕುಂದೂರು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯೆಯಾದ ಡಾ.ಪ್ರತೀಕ್ಷಾ ಉಪಸ್ಥಿತರಿದ್ದರು.



## ಹಿಂದಿ ದಿವಸ ಆಚರಣೆ

ಹಿಂದಿ ದಿವಸ ಆಚರಣೆಯಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ ಹಿರಿಯಡಕ ಸರಕಾರಿ ಪ.ಪೂ.ಕಾಲೇಜಿನ ಹಿಂದಿ ಉಪನ್ಯಾಸಕ ಡಾ. ಅನಂತರಾಮ ನಾಯಕ್'ಸಂವಿಧಾನದ 8ನೇ ಅನುಸೂಚಿಯಲ್ಲಿ ತಿಳಿಸಿರುವ 22 ಅಧಿಕೃತ ಭಾಷೆಗಳಲ್ಲಿ ಹಿಂದಿಯು ಪ್ರಮುಖ ಭಾಷೆಯಾಗಿದ್ದು, ಭಾರತೀಯರಲ್ಲಿಏಕತೆಯ ಮನೋಭಾವ ಮೂಡಿಸುವಲ್ಲಿ ಸಹಕಾರಿಯಾಗಿದೆ' ಎಂದು ಹೇಳಿದರು.

## ಸಂಪಾದಕೀಯ

ಪ್ರಿಯ ಓದುಗ,

ಪ್ರೇಮ ಬೀಜಗಳಿಹವು ವೈರಬೀಜಗಳವೊಲೆ
ಸೌಮ್ಯಮುಂ ಸಂಕ್ಷೋಭೆಯಂತೆ ಪ್ರಕೃತಿಯಲಿ
ಭ್ರಾಮಕದ ಸೃಷ್ಟಿಯಾ ವಿಷಮ ಲಕ್ಷಣಗಳಲಿ
ಸಾಮರಸ್ಯವನರಸೊ ಮಂಕುತಿಮ್ಮ

ಬದುಕಿನ ಎಲ್ಲಾ ಮಜಲುಗಳನ್ನೂ ಹತ್ತಿರದಿಂದ ಕಂಡ ಕವಿ ಡಿ.ವಿ.ಜಿ.ಯವರು ನುಡಿದ ಸಾಲುಗಳಿವು. ವೈರತ್ವದ ಬೀಜಗಳು ಇದ್ದಂತೆ, ಇಲ್ಲಿ ಪ್ರೇಮದ ಬೀಜಗಳೂ ಇವೆ. ಸೌಮ್ಯತೆಯಿದ್ದಂತೆ ಗದ್ದಲವೂ ಇದೆ. ಈ ವಿರೋಧಾಭಾಸವನ್ನು ಕಂಡಾಗ, ಪ್ರಕೃತಿಯ ಬಗ್ಗೆ ಭ್ರಮೆ ಹುಟ್ಟುತ್ತದೆ. ಈ ವಿಷಮ ಗುಣಗಳ ನಡುವೆ ನೀನು ಹೊಂದಾಣಿಕೆಯನ್ನು ಹುಡುಕು ಎಂದಿದ್ದಾರೆ. ಯುದ್ಧ, ಆರ್ಥಿಕ ಅಸ್ಥಿರತೆಯಿಂದ ಕಂಗಾಲಾಗಿರುವ ಈ ಪ್ರಪಂಚದಲ್ಲಿ ಒಂದಿಷ್ಟು ನೆಮ್ಮದಿಯನ್ನು ಕಂಡುಕೊಳ್ಳುವುದು ದುಸ್ತರವಾಗುತ್ತಿದೆ. ನಮ್ಮೊಳಗಿರುವ ಮಾನವೀಯತೆಯ ಕರೆಗೆ ಕಿವಿಗೊಟ್ಟು ಬದುಕಲು ಕಲಿತಾಗ, ಬದುಕು ಸಹ್ಯವಾಗುತ್ತದೆ.

ಸಮಾಜಮುಖಿ ಕಾರ್ಯಗಳಿಗೆ ಒತ್ತು ನೀಡುವ ಅಜೆಕಾರ್ ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟ್, ಸಂಸ್ಥಾಪಕರಾದ ದಿ.ಗೋಪಶೆಟ್ಟಿಯವರ ಹುಟ್ಟಿದ ದಿನವನ್ನು, ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವ ಆಶಾ ಕಾರ್ಯಕರ್ತೆಯರನ್ನು ಸನ್ಮಾನಿಸುವ ಮೂಲಕ, ಅರ್ಥಪೂರ್ಣವಾಗಿ ಆಚರಿಸಿತು. ಹಾಗೆಯೇ ಸಂಸ್ಥೆಯ ಆವರಣದಲ್ಲಿ ನೆಲೆಸಿ, ನಂಬಿದವರಿಗೆ ಇಂಬು ಕೊಡುವ ಗಣಿತನಗರ ಶ್ರೀ ಮಹಾಗಣಪತಿ ದೇವರ ಪ್ರತಿಷ್ಠಾ ಮಹೋತ್ಸವದಂದು ಸಂಸ್ಥೆಯ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಗುರುತಿಸಿ ಸನ್ಮಾನಿಸಲಾಯಿತು. ಸಂಕಷ್ಟಿಯ ಶುಭ ಮುಹೂರ್ತದಂದು ಜರಗುವ "ಮೌಲ್ಯಸುಧಾ" ಕಾರ್ಯಕ್ರಮ, ಕೇಳುಗರ ಬದುಕಿಗೆ ದಾರಿದೀವಿಗೆಯಾಗುತ್ತಿದೆ.

ನಮ್ಮ ವಿದ್ಯಾರ್ಥಿಗಳ ಸಾಧನೆಗಳ ಪಕ್ಷಿನೋಟವನ್ನು ಈ ಸಂಚಿಕೆಯಲ್ಲಿ ನೀಡಿದ್ದೇವೆ. ಎನ್.ಎಸ್.ಎಸ್ ಹಾಗೂ ಎನ್.ಸಿ.ಸಿ ವಿದ್ಯಾರ್ಥಿಗಳು ತಮ್ಮ ಬಿಡುವಿನ ವೇಳೆಯಲ್ಲಿ ಹಲವಾರು ಸಮಾಜಮುಖಿ ಕಾರ್ಯಕ್ರಮಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಹಾಗೆಯೇ ರಾಷ್ಟ್ರಮಟ್ಟದ ನೀಟ್, ಜೆ.ಇ.ಇ. ಮೈನ್, ಕೆಸಿಇಟಿ ಹಾಗೂ ಇನ್ನಿತರ ಪರೀಕ್ಷೆಗಳಲ್ಲಿ ಸಂಸ್ಥೆಯ ಸಾಧನೆಯನ್ನು ಇಲ್ಲಿ ದಾಖಲಿಸಿದ್ದೇವೆ.

ಹದಿಹರೆಯದ ಮನಸ್ಸುಗಳು ಸಮಾಜದ ಮುಖ್ಯ ವಾಹಿನಿಯಲ್ಲಿ ಇರಬೇಕಾದರೆ, ಸದಾ ಕಾಡುವ ಸಮಾಜ ಘಾತುಕ ಹವ್ಯಾಸಗಳಿಂದ ಅವರನ್ನು ದೂರವಿರಿಸಿ, ಸಮಾಜಮುಖಿ ಚಿಂತನೆಗಳತ್ತ, ಜೀವನದ ಉನ್ನತ ಸಾಧನೆಗಳತ್ತ ಕೊಂಡೊಯ್ಯುವುದು ಶಿಕ್ಷಣದ ಮೂಲ ಉದ್ದೇಶವಾಗಿರಬೇಕು. ನದಿಯ ನೀರನ್ನು ಮನಬಂದಂತೆ ಹರಿಯಲು ಬಿಟ್ಟರೆ, ಅದು ಎಲ್ಲೋ ಮರಳುಗಾಡಿನಲ್ಲಿ ಹೆಸರಿಲ್ಲದಂತೆ ಇಂಗಿ ಹೋಗುವುದು ದಿಟ. ಆದ್ದರಿಂದ ಇಂತಹ ಶಿಕ್ಷಣದ ಯಜ್ಞದಲ್ಲಿ ತಮ್ಮನ್ನು ತೊಡಗಿರುವ ಸಂಸ್ಥೆಗಳಿಗೆ ಬೆಂಬಲವಾಗಿ ನಿಲ್ಲುವ ಮನಸ್ಥಿತಿ ಸಮಾಜ ಹಾಗೂ ಸಮಾಜದ ಮುಖ ವಾಣಿಯಾದ ಮಾಧ್ಯಮಗಳದ್ದಾದರೆ, ಭವಿಷ್ಯದಲ್ಲಿ ನಮ್ಮ ದೇಶ ಸುಸಂಕೃತ ಪ್ರಜೆಗಳಿಂದ ತುಂಬಿ ಸುದೃಢವಾಗಬಹುದು. ನಮ್ಮ ರಾಷ್ಟ್ರದ ಅಜಾದೀ ಕಾ ಅಮೃತ ಮಹೋತ್ಸವದ ಈ ಸುಸಂದರ್ಭದಲ್ಲಿ ದೇಶ ಕಟ್ಟುವ ಕಾಯಕದಲ್ಲಿ ತೊಡಗಿರುವ ಪ್ರತಿಯೊಬ್ಬನಿಗೂ "ಜ್ಞಾನಸುಧಾ" ಬಳಗದ ಅಭಿವಂದನೆಗಳು.

**ಸಂಪಾದಕರು**

'ಜ್ಞಾನಸುಧಾ' ಪತ್ರಿಕೆ, ಗಣಿತ ನಗರ, ಕುಕ್ಕುಂದೂರು ಕಾರ್ಕಳ – 575117, ಉಡುಪಿ ಜಿಲ್ಲೆ

ಸಂದೇಶ

<JNANASUDHA><NAME><PLACE><MESSAGE>
to
9019736528

Ph: 08258-298455, 298655
Email:jnanasudha@gmail.com

'ನಹಿ ಜ್ಞಾನೇನ ಸದೃಶಂ' – ಜ್ಞಾನಸುಧಾದ ನಡಿಗೆ ಜ್ಞಾನದೆಡೆಗೆ

Printed & Published by AJEKAR PADMA GOPAL EDUCATION TRUST, 'Padma Gopal', Joduraste, Karkala - 576 117
Editorial Board : Principal, KJSPUC & KJSEMHS, Mrs. Jyothi Padmanabha, Mr. Manjunath. *Designed* @ RAJ Graphics, Hirebettu
Editorial Office : KARKALA JNANASUDHA P.U. COLLEGE, GANIT NAGAR, KUKKUNDOOR, KARKALA - 576 117, Email : jnanasudha@gmail.com Ph: 08258-298455, 298655